ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

2019-20 ಹಾಗೂ 2020-21ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಬಗ್ಗೆ

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –

44 (387) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2020-21ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆಯೇ;

(ಆ) ಬೆಳೆ ಸಮೀಕ್ಷೆ ಕಾರ್ಯದ ಮಾರ್ಗಸೂಚಿಗಳೇನು; (ವಿವರ ನೀಡುವುದು)

(ಇ) ಯಾರಿಂದ ಸಮೀಕ್ಷೆ ನಡೆಸಲಾಗುತ್ತಿದೆ; (ವಿವರ ನೀಡುವುದು)

(ಈ) ಇದುವರೆವಿಗೂ ಬೆಳೆ ಸಮೀಕ್ಷೆಯನ್ನು ಯಾವ ಪ್ರಮಾಣದಲ್ಲಿ ಮಾಡಲಾಗಿದೆ;

(ಉ) 2019-20ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯನ್ನು ಯಾರಿಂದ ಮಾಡಿಸಲಾಯಿತು; ಯಾವ ಅವಧಿಯೊಳಗೆ ಎಷ್ಟು ಪ್ರಮಾಣದ ಬೆಳೆ ಸಮೀಕ್ಷೆಯನ್ನು ಮಾಡಿಸಲಾಗಿದೆ; ಬೆಳೆ ಸಮೀಕ್ಷೆ ಪ್ರಕಾರ ಯಾವ ಬೆಳೆಗೆ ಎಷ್ಟು ಮಂದಿ ರೈತರಿಗೆ ಯಾವ ಯಾವ ರೂಪದ ಪರಿಹಾರವನ್ನು ನೀಡಲಾಗಿದೆ; (ಪ್ರತ್ಯೇಕವಾಗಿ ಪೂರ್ಣ ವಿವರ ನೀಡುವುದು)

(ಊ) ನೀಡಲಾದ ಪರಿಹಾರದ ಒಟ್ಟು ಮೊತ್ತವೆಷ್ಟು?